

ಚಿತ್ರ: ಎಸ್.ಕೆ. ದಿನೇಶ್

# ಆಭರಣ ಫಳ ಫಳ ಹೊಳೆಯಬೇಕೆ?

**ಮಿಂಚುವ ರೇಷ್ಮೆ ಸೀರೆಗೆ ಫಳ ಫಳ ಹೊಳೆಯುವ ಆಭರಣ ಒಳ್ಳೆಯ ಕಾಂಬಿನೇಷನ್. ಆಭರಣ ಸದಾ ಹೊಳಪಿನಿಂದ ಕೂಡಿದ್ದರೆ ಅದನ್ನು ಹಾಕಿಕೊಳ್ಳುವುದರಲ್ಲಿ ಮಹಿಳೆಗೆ ಏನೋ ತೃಪ್ತಿ ಸಿಗುತ್ತದೆ.**

★ ಪದ್ಮಾ ಮೂರ್ತಿ, ಅರಸೀಕೆರೆ

ಮದುವೆ, ಮುಂಜಿ, ಗೃಹಪ್ರವೇಶಗಳಂತಹ ಶುಭ ಸಮಾರಂಭಗಳಿಗೆ ಹೋಗುವಾಗ ಸಂಪ್ರದಾಯಸ್ಥ ಮಹಿಳೆಯರಿಗೆ ರೇಷ್ಮೆ ಸೀರೆ ಹೇಗೆ ಕಡ್ಡಾಯ ಎನಿಸುತ್ತದೋ ಹಾಗೇ ಒಡವೆಗಳು ಕೂಡ. ಮಿರಿಮಿರಿ ಮಿಂಚುವ ರೇಷ್ಮೆ ಸೀರೆ ಉಟ್ಟುಕೊಂಡಾಗ ಅದಕ್ಕೊಪ್ಪುವ ಆಭರಣ ತೊಟ್ಟುಕೊಳ್ಳದಿದ್ದರೆ ಹೇಗೆ? ಅದೂ ಫಳಫಳ ಹೊಳೆಯುತ್ತಿದ್ದರೆ ಇನ್ನೂ ಗ್ರ್ಯಾಂಡ್ ಆಗಿ ಕಾಣ ಬಹುದು ಎಂಬುದು ಮಹಿಳೆಯರ ಲೆಕ್ಕಾಚಾರ.

ಹಾಗಿದ್ದರೆ ಒಡವೆ ಸದಾ ಫಳ ಫಳ ಹೊಳೆಯುತ್ತಿರಬೇಕಾದರೆ ಏನು ಮಾಡಬೇಕು?

ಮನೆಯಲ್ಲಿರುವ ಒಡವೆಗಳನ್ನು ಸದಾ ಹೊಳೆಯುವಂತೆ ಮಾಡಲು ಕೆಲವೊಂದು ಅಂಶಗಳನ್ನು ಪಾಲಿಸಬೇಕಾಗುತ್ತದೆ. ಇವುಗಳನ್ನು ಅನುಸರಿಸಿ ಕೊಂಡರೆ ಆಭರಣಗಳೆಲ್ಲಾ ಹೊಚ್ಚ ಹೊಸದಂತೆ ಕಾಣಿಸುತ್ತದೆ.

ಉಗುರು ಬೆಚ್ಚಗಿನ ನೀರಿಗೆ ಸ್ವಲ್ಪ ಸೋಪಿನ ಪುಡಿ, ಒಂದು ಹನಿ ಅಮೋನಿಯ ದ್ರಾವಣ ಹಾಕಿ ಬಂಗಾರದ ಒಡವೆಗಳನ್ನು ಆ ನೀರಲ್ಲಿ 8–10 ನಿಮಿಷಗಳು ಹಾಗೆ ಇಡಿ. ನಂತರ ಮೆತ್ತನೆಯ, ಬ್ರಿಸಲ್ ಇರುವ ಬ್ರಷ್‌ನಿಂದ ನಿಧಾನವಾಗಿ ಉಜ್ಜಿದರೆ ಚಿನ್ನದ ನಗ ಆಗತಾನೇ ಕೊಂಡು ತಂದ ಆಭರಣದಂತಾಗುತ್ತದೆ.

ಬಿಸಿ ನೀರಲ್ಲಿ ಸ್ವಲ್ಪ ಅದೇ ಸೋಪಿನ ಪುಡಿ ಹಾಕಿ, ಅದರಲ್ಲಿ ವಜ್ರಾಭರಣ ಹಾಕಿ ಸ್ವಲ್ಪ ಕಾಲ ನೆನೆಸಿಡಿ. ಆಗ ಅವುಗಳ ಮೇಲೆ ಶೇಖರವಾದ ಕೊಳೆ ಹೋಗುತ್ತದೆ. ಬಳಿಕ ಒಂದು ಹೊಸ ಸಣ್ಣ ಟೂತ್ ಬ್ರಷ್‌ನಿಂದ, ನಿಧಾನವಾಗಿ ಜಾಯಿಂಟ್‌ನಲ್ಲಿರುವ ಕೊಳೆಯನ್ನು ತೆಗೆಯಿರಿ, ನಂತರ ಮೆತ್ತನೆ ಟಿಷ್ಯು ಪೇಪರಲ್ಲಿ ಸುತ್ತಿಡಿ. ನೀರೆಲ್ಲಾ ಹೀರುವವರೆಗೂ ಒಣಗಿಸಿ, ಮೆತ್ತನೆ ವಸ್ತ್ರದಲ್ಲಿ ಒರೆಸಿಟ್ಟರೂ ಸಾಕು. ಹೊಸದರಂತೆ ಥಳ ಥಳ ಹೊಳೆಯುವುದು.

ಮುತ್ತಿನ ಒಡವೆಗಳಂತೂ ತುಂಬಾ ಡೆಲಿಕೇಟಾಗಿರುತ್ತವೆ. ಬಹಳ ಎಚ್ಚರಿಕೆಯಿಂದ ಶುಭ್ರಗೊಳಿಸಬೇಕು. ಇಲ್ಲದಿದ್ದರೆ ಮುತ್ತಿನ ಹೊಳಪೇ ಹೋಗುವ ಸಂಭವವಿರುತ್ತದೆ. ಒಂದು ಮೃದು ಬಟ್ಟೆಯಿಂದ ಶಾಂಪು ಅದ್ದಿಕೊಂಡು, ನಿಧಾನವಾಗಿ ಒರೆಸಿ ಶುಚಿಗೊಳಿಸಿ ಸೋಪಲ್ಲಿ ತೊಳೆಯವುದು ಬೇಡ. ಅದರ ಸಿಪ್ಪೆ ಹೋಗುವ ಸಂಭವವಿರುತ್ತದೆ.

ಇನ್ನು ಬೆಳ್ಳಿ ಒಡವೆಯನ್ನು ಫಳ ಫಳ ಮಾಡುವುದು ಸುಲಭ, ಅಂಟುವಾಳ ಕಾಯಿ, ಹುಣಸೆಹಣ್ಣು, ನಿಂಬೆರಸ ಬಳಸಿ. ಇವುಗಳಲ್ಲಿ ಯಾವುದಾದರು ಒಂದನ್ನು ನೀರಲ್ಲಿ ಹಾಕಿ 5 ನಿಮಿಷಗಳ ಕಾಲ ಬೆಳ್ಳಿ ಆಭರಣಗಳನ್ನು ಹಾಕಿ ಕುದಿಸಿದರೆ ಸಾಕು. ಕೊಳೆಯಲ್ಲಾ ಬಿಟ್ಟು, ಫಳ ಫಳ ಹೊಳೆಯುತ್ತದೆ.

ನೀರಿಂದ ತೆಗೆದು ಹಲ್ಲುಜ್ಜುವ ಬ್ರಷ್‌ನಿಂದ ಒಡವೆ ಡಿಸೈನ್ ಮೇಲೆ ಸ್ವಲ್ಪ ಉಜ್ಜಿ ಒರೆಸಿ. ಅಲ್ಲಿ ಶೇಖರಗೊಂಡಿರುವ ಕೊಳೆಗಳು ದೂರವಾಗಿ ಪಾತ್ರೆ ಹೊಳೆಯುತ್ತವೆ. ಆದರೆ ಹರಳು ಹುದುಗಿಸಿರುವ ಬೆಳ್ಳಿ ಆಭರಣ ಅಥವಾ ಪಾತ್ರೆಗಳನ್ನು ಹೀಗೆ ಮಾಡುವುದು ಬೇಡ. ಹಾಗೇ ಮೆತ್ತಗಿನ ಬಟ್ಟೆಯಲ್ಲಿ ಉಜ್ಜಿ. ಒರೆಸಿ, ಒಣಗಿಸಿ ಇಟ್ಟರೆ, ಹೊಸದರಂತೆ ಹೊಳೆಯುತ್ತದೆ.

ಈ ಎಲ್ಲಾ ಕ್ರಮಗಳನ್ನು ಅನುಸರಿಸಿದರೆ, ಆಭರಣಗಳು ಹೊಳೆಯುತ್ತವೆ. ಅಷ್ಟೇ ಅಲ್ಲ; ದೀರ್ಘ ಸಮಯ ಬಾಳಿಕೆಯೂ  ಬರುತ್ತದೆ.